'ವಿವೇಕಪ್ರಭ' ಪತ್ರಿಕೆಯ ವತಿಯಿಂದ

# ಶ್ರೀರಾಮಕೃಷ್ಣ ಭಕ್ತ ಸಮಾವೇಶ–2011

**10.10.2011 ರಿಂದ 12.10.2011 ; ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಮೈಸೂರು**

ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳು ಆಧುನಿಕ ಯುಗದ ಆಧ್ಯಾತ್ಮಿಕ ಜ್ಯೋತಿಗಳಾಗಿವೆ. ಈ ಉದಾತ್ತ ಚಿಂತನೆಗಳನ್ನು ಭಕ್ತರು ಒಟ್ಟಾರೆ ಸೇರಿ ಮನನ ಮಾಡುವ ಆವಶ್ಯಕತೆ ಇದೆ. ಈ ಉದ್ದೇಶಕ್ಕಾಗಿಯೇ ವಿವೇಕಪ್ರಭ ಪತ್ರಿಕೆಯ ವತಿಯಿಂದ **'ಶ್ರೀರಾಮಕೃಷ್ಣ ಭಕ್ತ ಸಮಾವೇಶ – 2011'** ಅನ್ನು ಆಯೋಜಿಸಲಾಗಿದೆ.

> **ಸೂಚನೆ :**
>
> **21.10.2011 ರಿಂದ 23.10.2011 ರಂದು ನಡೆಯಬೇಕಾಗಿದ್ದ ಕಾರ್ಯಕ್ರಮವನ್ನು ಅನಿವಾರ್ಯ ಕಾರಣಗಳಿಂದ 10.10.2011 ರಿಂದ 12.10.2011 ರವರೆಗೆ ನಡೆಸುತ್ತಿದ್ದೇವೆ. ದಯವಿಟ್ಟು ಭಕ್ತರೆಲ್ಲರೂ ಈ ಬದಲಾವಣೆಯನ್ನು ಗಮನಿಸಬೇಕಾಗಿ ವಿನಂತಿ.**

ಮೂರು ದಿನಗಳ ಈ ಸಮಾವೇಶದಲ್ಲಿ **ದಿವ್ಯತ್ರಯರ ಜೀವನ–ಸಂದೇಶಗಳ ಆಲೋಚನೆ, ಶಾಸ್ತ್ರಗಳ ಬಗ್ಗೆ ತಿಳಿವಳಿಕೆ, ಧ್ಯಾನದ ಆಚರಣೆಯ ಬಗ್ಗೆ ಅರಿವು, ದೈನಂದಿನ ಜೀವನದಲ್ಲಿ ಅಧ್ಯಾತ್ಮವನ್ನು ಅಳವಡಿಸಿಕೊಳ್ಳುವುದು ಹೇಗೆ?** – ಈ ವಿಷಯಗಳ ಬಗ್ಗೆ ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳು ಮಾರ್ಗದರ್ಶನ ಮಾಡುವರು. ಹಾಗೆಯೇ, ಸೂಲಿಬೆಲೆ ಚಕ್ರವರ್ತಿ ಮುಂತಾದ ಸುಪ್ರಸಿದ್ಧ ಭಾಷಣಕಾರರಿಂದ ಪ್ರವಚನಗಳು, ಶ್ರೀ ಗುರುರಾಜ ಕರ್ಜಗಿ ಮತ್ತು ತಂಡದವರಿಂದ 'ದಾಸವಾಣಿ', ವಿದ್ವಾನ್ ಎಂ. ಮಂಜುನಾಥ ಮತ್ತು ಎಂ. ನಾಗರಾಜ್ ಅವರಿಂದ ಶಾಸ್ತ್ರೀಯ ಸಂಗೀತ, ಶ್ರೀ ಮತ್ತೂರು ಮಾರ್ಕಂಡೇಯ ಅವಧಾನಿ ಮತ್ತು ಶ್ರೀ ಮತ್ತೂರು ಕುಮಾರಸ್ವಾಮಿ ಅವರಿಂದ ಗಮಕ, ವ್ಯಾಖ್ಯಾನ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿತವಾಗಿವೆ. ಅಲ್ಲದೆ, ಪ್ರಸಿದ್ಧ ಗಾಯಕರಿಂದ ದೈನಂದಿನ ಭಜನೆಯ ಜೊತೆಗೆ, ಭಾಷಣಗಳ ಮಧ್ಯೆ 'ನಾಮಸಂಕೀರ್ತನೆ' ಕಾರ್ಯಕ್ರಮವೂ ಇರುತ್ತದೆ. ಈ ಸಮಾವೇಶದಲ್ಲಿ 'ವಿವೇಕಪ್ರಭ'ದ ಪ್ರಚಾರದ ಬಗ್ಗೆಯೂ ಸಮಾಲೋಚನೆ ನಡೆಯುವುದು.

ನಂಜರಾಜ ಬಹದ್ದೂರ್ ಛತ್ರವು ಮೈಸೂರಿನ ಮಧ್ಯಭಾಗದಲ್ಲಿದ್ದು, ಅಲ್ಲಿಯೇ ಸಮಾರಂಭದ ಮತ್ತು ಊಟ ವಸತಿಗಳ ಏರ್ಪಾಡು ಇರುತ್ತದೆ. ವಿಶಾಲವಾದ ಸ್ಥಳ, ಉತ್ತಮ ವಸತಿ ವ್ಯವಸ್ಥೆಯನ್ನು ಈ ಛತ್ರ ಹೊಂದಿದೆ. ಸುಮಾರು 800–1000 ಜನರಿಗೆ ಇಲ್ಲಿ ಊಟವಸತಿಗಳ ಸೌಕರ್ಯ ಮಾಡಬಹುದಾಗಿದೆ.

1. **ಕಾಣಿಕೆ : (ವಸತಿಸಹಿತ) – ರೂ.500/– ಮಾತ್ರ ; (ವಸತಿರಹಿತ) – ರೂ.350/– ಮಾತ್ರ**
2. **ಶಿಬಿರಾರ್ಥಿಗಳು 10.10.2011 (ಸೋಮವಾರ) ಮಧ್ಯಾಹ್ನ ಒಂದು ಗಂಟೆಯ ಒಳಗೆ ಛತ್ರಕ್ಕೆ ಬರಬೇಕು ಮತ್ತು 12.10.2011 ರಂದು (ಬುಧವಾರ) ಮಧ್ಯಾಹ್ನ 3.30 ರ ನಂತರ ತೆರಳಬಹುದು. ವಸತಿ ರಹಿತ ಅಭ್ಯರ್ಥಿಗಳು ಪ್ರತಿನಿತ್ಯ ಕಾರ್ಯಕ್ರಮಕ್ಕೆ ಬಂದು ತದನಂತರ ಮನೆಗೆ ತೆರಳಬಹುದು.**
3. **ಆಸಕ್ತರು, ಭಾಗವಹಿಸುವ ಪ್ರತಿ ವ್ಯಕ್ತಿಗೆ (ವಸತಿಸಹಿತ) – ರೂ.500/– ಮಾತ್ರ ; (ವಸತಿರಹಿತ) – ರೂ.350/– ಮಾತ್ರ ಡಿ.ಡಿ. ಕಳುಹಿಸಿ ನೋಂದಾಯಿಸಿಕೊಳ್ಳಬಹುದು. ಅವರಿಗೆ 10 ರಸೀದಿಗಳು ಇರುವ ಒಂದು ರಸೀದಿ ಪುಸ್ತಕವನ್ನು ಕಳಿಸಲಾಗುವುದು. ಅವರು ಆಗಸ್ಟ್ 30 ರ ಒಳಗೆ ವಿವೇಕಪ್ರಭ ಚಂದಾ ಮಾಡಿಸಲು ಪ್ರಯತ್ನಿಸಬೇಕು. ಆಗಸ್ಟ್ 30 ರ ನಂತರ ಚಂದಾಹಣವನ್ನು ಕಳುಹಿಸಿದರೆ, ತಮಗೆ ಸೂಚನಾಪತ್ರವನ್ನು ಅಂಚೆಯ ಮೂಲಕ ಕಳಿಸಲಾಗುವುದು. ಅದು ಸಾಧ್ಯವಾಗದಿದ್ದರೂ, ಆದ್ಯತೆಯ ಪ್ರಕಾರ ನಿಮಗೆ ಶಿಬಿರಕ್ಕೆ ಬರಬೇಕಾದ ಸೂಚನೆಯನ್ನು ತಲುಪಿಸಲಾಗುವುದು. 'ವಿವೇಕಪ್ರಭ' ಚಂದಾ ಮಾಡಿಸುವುದನ್ನು ಈ ಸಮಾವೇಶಕ್ಕೆ ಆದ್ಯತೆಯೆಂದು ಪರಿಗಣಿಸಲಾಗುವುದೇ ಹೊರತು ಇದು ನಿರ್ಬಂಧವಲ್ಲ.**
4. **ಒಟ್ಟು ಕೇವಲ 800 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿರುವುದರಿಂದ ಕೂಡಲೇ ಹಣ ಕಳುಹಿಸಿ, ನೋಂದಾಯಿಸಿಕೊಳ್ಳಿ. ದೀರ್ಘಕಾಲದ ಕಾಯಿಲೆಗಳಿಂದ ನರಳುತ್ತಿರುವವರು ಭಾಗವಹಿಸದಿರುವುದು ಒಳ್ಳೆಯದು.**
5. **ಹಣವನ್ನು ಕೇವಲ ಡಿ.ಡಿ. ಮೂಲಕ 'Sri Ramakrishna Ashrama, Viveka Prabha A/c' ಹೆಸರಿಗೆ ಕಳಿಸಬೇಕು. ಲಕೋಟೆಯ ಮೇಲೆ 'ವಿವೇಕಪ್ರಭ ಭಕ್ತ ಸಮಾವೇಶ – 2011' ಎಂದು ನಮೂದಿಸಿರಬೇಕು. ಪತ್ರದಲ್ಲಿ ಹೆಸರು, ವಿಳಾಸ, ಮೊಬೈಲ್ ನಂಬರ್, ಇ–ಮೈಲ್ ವಿಳಾಸ, ವಯಸ್ಸುಗಳನ್ನು ಬರೆಯಬೇಕು. ಒಂದೇ ಪತ್ರದಲ್ಲಿ ಎಷ್ಟು ಜನರನ್ನು ಬೇಕಾದರೂ ನಮೂದಿಸಬಹುದು ಹಾಗೂ ಒಟ್ಟು ಹಣವನ್ನು ಒಂದೇ ಡಿ.ಡಿ.ಯ ಮೂಲಕ ಕಳಿಸಬಹುದು.**
6. **ಹೊಟೆಲ್ ಕೊಠಡಿ ವ್ಯವಸ್ಥೆ ಇಚ್ಛಿಸುವವರು ಬರೆದು ತಿಳಿಸಿದರೆ, ಅವರಿಗೆ ಮಾಹಿತಿಪತ್ರ ಕಳಿಸಲಾಗುವುದು.**
7. **ಡಿ.ಡಿ. ಮತ್ತು ಪತ್ರವನ್ನು ಕಳಿಸಬೇಕಾದ ವಿಳಾಸ : 'ವಿವೇಕಪ್ರಭ ಭಕ್ತ ಸಮಾವೇಶ – 2011', ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು–570 020**